## ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂ:ಕಂ:ವಿವಾದ:13/2016-17 ದಿ:29-09-2016

ಉಪಸ್ಥಿತರು: ಬಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1)ಎನ್. ಲಕ್ಷ್ಮೀಕಾಂತರೆಡ್ಡಿ ತಂದೆ: ಲೇಟ್ ಎನ್. ಮೇಲಪ್ಪ ರೆಡ್ಡಿ
2)ಎನ್. ಹಿಮಂತರೆಡ್ಡಿ ತಂದೆ: ಲೇಟ್ ಎನ್. ಮೇಲಪ್ಪ ರೆಡ್ಡಿ
3)ಎನ್. ಲಕ್ಷ್ಮೀರೆಡ್ಡಿ ತಂದೆ: ಲೇಟ್ ಎನ್. ಮೇಲಪ್ಪ ರೆಡ್ಡಿ
4)ಎನ್. ಶ್ರೀನಿವಾಸರೆಡ್ಡಿ ತಂದೆ: ಎನ್.ಮೇಲಪ್ಪ ರೆಡ್ಡಿ
ಎಲ್ಲರ ವಾಸ: ಕರೂರು ಗ್ರಾಮ , ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

1) ಕೆ. ರತ್ನಮ್ಮ ತಂದೆ: ಎಸ್.ಲಕ್ಷ್ಮೀಕಾಂತರೆಡ್ಡಿ
2) ಶ್ರೀದೇವಿ ತಂದೆ: ಎಸ್.ಲಕ್ಷ್ಮೀಕಾಂತರೆಡ್ಡಿ
3) ಶಕುಂತಲಮ್ಮ ತಂದೆ: ಎಸ್.ಲಕ್ಷ್ಮೀಕಾಂತರೆಡ್ಡಿ
4) ಶಿಲ್ಪ ತಂದೆ: ಎಸ್.ಲಕ್ಷ್ಮೀಕಾಂತರೆಡ್ಡಿ
ಎಲ್ಲರ ವಾಸ: ಕರೂರು ಗ್ರಾಮ ಸಿರುಗುಪ್ಪ ತಾಲೂಕ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಟು ಸಂಖ್ಯೆ |
|---|---|---|---|---|
| ಕರೂರು ಗ್ರಾಮ | 431/B2B | 2-35 | H-168 / 2015-16 | 504/2015-16 |

ಪೀಠಿಕೆ:-

ಸಿರುಗುಪ್ಪ ತಾಲೂಕಿನ **ಕರೂರು ಗ್ರಾಮದ ಸ.ನಂ.431/B2B** ವಿಸ್ತೀರ್ಣ 2-35ಎಕರೆ ಜಮೀನಿಗೆ ಸಂಭಂದಿಸಿದಂತೆ ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿಪತ್ರ ನಂ: **SRG-1-00587/2016-17 Dt.26-04-2016** ರ **ನೊಂದಣಿ ಪಾಲು ವಿಭಾಗ ಪತ್ರ ಪ್ರಕಾರ 1) ಎನ್. ಲಕ್ಷ್ಮೀರೆಡ್ಡಿ ತಂದೆ: ಲೇಟ್ ಎನ್.ಮೇಲಪ್ಪ ರೆಡ್ಡಿ ಇವರ ಹೆಸರಿನಲ್ಲಿ** ಖಾತೆಬದಲಾವಣೆ ಮಾಡಲು ನಮೂನೆ-21ನ್ನು ಪ್ರಚುರ ಪಡಿಸಲಾಗಿ. ನಿಗದಿತ ಅವಧಿಯೊಳಗೆ 1)ಕೆ.ರತ್ನಮ್ಮ 2) ಶ್ರೀದೇವಿ **3) ಶಕುಂತಲಮ್ಮ 4) ಶಿಲ್ಪ, ಎಲ್ಲರ ತಂದೆ: ಎನ್. ಲಕ್ಷ್ಮೀಕಾಂತರೆಡ್ಡಿ, ಕರೂರು ಗ್ರಾಮ ಇವರು ದಿ: 18-05-2016 ರಂದು** ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು **ದಿ:24-06-2016, 01-07-2016,15-07-2016,05-08-2016 ಮತ್ತು 16-09-2016 ರಂದು ಪ್ರಕರಣಕ್ಕೆ** ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿ

ವಾದಿಗಳಾದ ಎನ್.ಲಕ್ಷ್ಮೀರೆಡ್ಡಿ ತಂದೆ: ಎನ್. ಮೇಲಪ್ಪ ರೆಡ್ಡಿ ಕರೂರು ಗ್ರಾಮ, ಸಿರುಗುಪ್ಪ ತಾಲೂಕ ಇವರು ಕರೂರು ಮದ ಸ.ನಂ.431/B2B ವಿಸ್ತೀರ್ಣ 2-35 ಎಕರೆ ಜಮೀನು 1)ಎನ್. ಹಿಮಂತರೆಡ್ಡಿ ತಂದೆ: ಲೇಟ್ ಎನ್. ಮೇಲಪ್ಪ ರೆಡ್ಡಿ .ಎನ್. ಲಕ್ಷ್ಮೀರೆಡ್ಡಿ ತಂದೆ: ಲೇಟ್ ಎನ್. ಮೇಲಪ್ಪ ರೆಡ್ಡಿ 3) ಎನ್. ಶ್ರೀನಿವಾಸರೆಡ್ಡಿ ತಂದೆ: ಎನ್.ಮೇಲಪ್ಪ ರೆಡ್ಡಿ ಇವರಿಂದ ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿಪತ್ರ ನಂ: **SRG-1-00587/2016-17 Dt.26-04-2016** ರ ನೋಂದಣಿ ಪಾಲು ವಿಭಾಗ ಪತ್ರ ಪ್ರಕಾರ ಹಕ್ಕು ಬದಲಾವಣೆ ಸಂದರ್ಭದಲ್ಲಿ 1) ಕೆ. ರತ್ನಮ್ಮ 2) ಶ್ರೀದೇವಿ 3) ಶಕುಂತಲಮ್ಮ 4) ಶಿಲ್ಪ, ಕರೂರು ಗ್ರಾಮ ಇವರು ತಕರಾರು ಅರ್ಜಿ ಸಲ್ಲಿಸಿದ್ದು, ತದನಂತರದಲ್ಲಿ ವಿಚಾರಣೆ ಸಂದರ್ಭದಲ್ಲಿ ತಮ್ಮ ತಕರಾರು ಅರ್ಜಿಯನ್ನು ಹಿಂದಕ್ಕೆ ಪಡೆದಿರುವುದಾಗಿ ಮೌಖಿಕ ಹೇಳಿಕೆಯನ್ನು ನೀಡಿರುತ್ತಾರೆ. ಕಾರಣ ಅವರ ತಕರಾರು ಅರ್ಜಿಯನ್ನು ತಳ್ಳಿ ಹಾಕಿ ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿಪತ್ರ ನಂ: **SRG-1-00587/2016-17 Dt.26-04-2016** ರ ನೋಂದಣಿ ಪಾಲು ವಿಭಾಗ ಪತ್ರ ಪ್ರಕಾರ ನನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು

ಪ್ರತಿವಾದಿಗಳಾದ 1)ಕೆ. ರತ್ನಮ್ಮ 2)ಶ್ರೀದೇವಿ 3)ಶಕುಂತಲಮ್ಮ 4)ಶಿಲ್ಪ, ಎಲ್ಲರ ತಂದೆ: ಎನ್. ಲಕ್ಷ್ಮೀಕಾಂತರೆಡ್ಡಿ ಕರೂರು ಗ್ರಾಮ ಇವರು ಕರೂರು ಗ್ರಾಮದ ಸ.ನಂ.431/B2B ವಿಸ್ತೀರ್ಣ 2-35 ಎಕರೆ ಜಮೀನು 1)ಎನ್. ಹಿಮಂತರೆಡ್ಡಿ ತಂದೆ: ಲೇಟ್ ಎನ್. ಮೇಲಪ್ಪ ರೆಡ್ಡಿ 2)ಎನ್. ಲಕ್ಷ್ಮೀರೆಡ್ಡಿ ತಂದೆ: ಲೇಟ್ ಎನ್. ಮೇಲಪ್ಪ ರೆಡ್ಡಿ 3) ಎನ್. ಶ್ರೀನಿವಾಸರೆಡ್ಡಿ ತಂದೆ: ಎನ್.ಮೇಲಪ್ಪ ರೆಡ್ಡಿ ಇವರಿಂದ ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿಪತ್ರ ನಂ: **SRG-1-00587/2016-17 Dt.26-04-2016** ರ ನೋಂದಣಿ ಪಾಲು ವಿಭಾಗಪತ್ರ ಪ್ರಕಾರ ಹಕ್ಕು ಬದಲಾವಣೆ ಸಂದರ್ಭದಲ್ಲಿ ನಮ್ಮ ತಂದೆಯಾದ ಎನ್. ಲಕ್ಷ್ಮೀಕಾಂತರೆಡ್ಡಿ ಮತ್ತು ನಮ್ಮ ಚಿಕ್ಕಪ್ಪನವರ ಹೆಸರಿನಲ್ಲಿ ಜಮೀನು ಜಂಟಿಯಾಗಿದ್ದು ಸದ್ರಿ ಆಸ್ತಿ ಈ ಪೈಕಿ ನಮ್ಮ ಚಿಕ್ಕಪ್ಪನಾದ ಎನ್.ಲಕ್ಷ್ಮೀರೆಡ್ಡಿ ತಂದೆ: ಎನ್. ಮೇಲಪ್ಪ ಇವರ ವಿಸ್ತೀರ್ಣ 0-60 ಸೆಂಟ್ಸ್ ಜಮೀನು ಹಕ್ಕು ಬದಲಾವಣೆಯಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಜಮೀನುಗಳನ್ನು ಗಮನಕ್ಕೆ ತರದಂತೆ ಎನ್. ಲಕ್ಷ್ಮೀರೆಡ್ಡಿ ತಂದೆ: ಎನ್. ಮೇಲಪ್ಪ ರೆಡ್ಡಿ ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡದಂತಗೆ ತಡೆ ಹಿಡಿಯಬೇಕೆಂದು ದಿ: 18-05-2016 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ವಿಚಾರಣೆ ಸಂದರ್ಭದಲ್ಲಿ ಎಲ್ಲಾ ನಾಲ್ಕು ಜನ ತಕರಾರುದಾರರು ದಿ:16-09-2016 ರಂದು ನಡೆದ ವಿಚಾರಣೆ ಸಮಯದಲ್ಲಿ ತಮ್ಮ ತಕರಾರು ಅರ್ಜಿಯನ್ನು ವಾಪಾಸ್ಸು ಪಡೆಯುತ್ತೇವೆಂದು ನ್ಯಾಯಾಲಯದಲ್ಲಿ ಮೌಖಿಕ ಹೇಳಿಕೆಯನ್ನು ನೀಡಿರುತ್ತಾರೆ.

(ಟಿ.ಪ್ರಕಾಶ್, ವಕೀಲರು, ಬಳ್ಳಾರಿ ಇವರು ಪ್ರತಿವಾದಿಗಳ ಪರ ದಿ; 05-08-2016 ರಂದು ವಕಾಲತ್ತು ಹಾಕಿರುತ್ತಾರೆ. )

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ, ವಿಚಾರಣೆ ಮಾಡಲಾಗಿ, ಸದರಿ ಕರೂರು ಗ್ರಾಮದ ಸ.ನಂ.431/B2B ವಿಸ್ತೀರ್ಣ 2-35 ಎಕರೆ ಜಮೀನು ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿಪತ್ರ ನಂ: **SRG-1-00587/2016-17 Dt.26-04-2016** ರಲ್ಲಿ ನೋಂದಣಿ ಪಾಲು ವಿಭಾಗ ಪತ್ರ ಪ್ರಕಾರ ಎನ್. ಲಕ್ಷ್ಮೀ ರೆಡ್ಡಿ ತಂದೆ: ಲೇಟ್ ಎನ್. ಮೇಲಪ್ಪ ರೆಡ್ಡಿ ಇವರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಕರೂರು ಗ್ರಾಮದ ಸ.ನಂ.431/B2B ವಿಸ್ತೀರ್ಣ 2-35 ಎಕರೆ ಜಮೀನು ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿಪತ್ರ ನಂ: **SRG-1-00587/2016-17 Dt.26-04-2016** ರಲ್ಲಿ ನೋಂದಣಿ ಪಾಲು ವಿಭಾಗ ಪತ್ರ ಪ್ರಕಾರ ಎನ್.ಲಕ್ಷ್ಮೀರೆಡ್ಡಿ ತಂದೆ: ಲೇಟ್ ಎನ್.ಮೇಲಪ್ಪ ರೆಡ್ಡಿ ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:29-09-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು
ಉಪ ತಹಶೀಲ್ದಾರರು
ನಾಡ ಕಾರ್ಯಾಲಯ, ಕರೂರು.
ಸಿರುಗುಪ್ಪ ತಾಲೂಕು

ಇದರ ಪ್ರತಿಯನ್ನು:
1, ವಾದಿ ಹಾಗೂ ಪ್ರತಿವಾದಿಗಳು
2, ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ
3. ಹೆಚ್ಚಿನ ಕಡತಕ್ಕೆ